**ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು (ವಿಧಾನ ಸಭಾ ಕ್ಷೇತ್ರ) ಇವರು ನಿಯಮ 72ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಕುರಿತು.**

-:: ಪ್ರಶ್ನೆ ::-

ಕೋಲಾರ ನಗರಸಭೆಯಲ್ಲಿ ಸ್ವಚ್ಛ ಭಾರತ ಮಿಷನ್ 1.0 ಯೋಜನೆಯಡಿ ಘನ ತ್ಯಾಜ್ಯ ವಸ್ತು ನಿರ್ವಹಣೆ ಸಂಬಂಧ ಇವಿ ಚಾರ್ಜಿಂಗ್ ಪಾಯಿಂಟ್, ಸಿ.ಸಿ. ಟಿವಿ ಕ್ಯಾಮೆರಾ ಸೇರಿದಂತೆ ಒಟ್ಟು ರೂ.2.4 ಕೋಟಿ ಅನುದಾನದಲ್ಲಿ ವಿವಿಧ ಪರಿಕರ ಖರೀದಿಯಲ್ಲಿ ಅವ್ಯವಹಾರ ನಡೆದಿದೆ. ಎರಡು ಚಾರ್ಜಿಂಗ್ ಪಾಯಿಂಟ್‌ಗಳಿಗೆ ಬರೋಬ್ಬರಿ ರೂ. 6.77 ಲಕ್ಷ ಬಿಲ್ ಮಾಡಲಾಗಿದೆ. ಒಂದಕ್ಕೆ ರೂ. 3.38 ಲಕ್ಷದಂತೆ ಖರೀದಿಸಲಾಗಿದೆ. ಇದಲ್ಲದೆ ಇಂದಿರಾ ಕ್ಯಾಂಟೀನ್‌ನಲ್ಲಿ ದಿನಕ್ಕೆ 200 ಊಟ ಕೊಟ್ಟು, ಸಾವಿರ ಊಟದ ಬಿಲ್ ಮಾಡುತ್ತಿದ್ದಾರೆ. ಒಟ್ಟಾರೆಯಾಗಿ ನಗರಸಭೆಯಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಸಾರ್ವಜನಿಕರ ಹಣವನ್ನು ಲೂಟಿ ಮಾಡುತ್ತಿರುವ ಈ ಪ್ರಕರಣವನ್ನು ಮಾನ್ಯ ಪೌರಾಡಳಿತ ಇಲಾಖಾ ಸಚಿವರ ಗಮನ ಸೆಳೆದಿರುವ ಬಗ್ಗೆ.

-:: ಉತ್ತರ ::-

- ಸ್ವಚ್ಛ ಭಾರತ್ ಮಿಷನ್ (ನಗರ)-1.0 ಯೋಜನೆಯಡಿ ಕೋಲಾರ ನಗರಸಭೆಯ ರೂ. 11.47 ಕೋಟಿಗಳ ಮೊತ್ತದ ಘನತ್ಯಾಜ್ಯ ನಿರ್ವಹಣೆ ಸಮಗ್ರ ವಿಸ್ತೃತ ಯೋಜನಾ ವರದಿಯನ್ನು (DPR) ರಾಜ್ಯ ಮಟ್ಟದ ಉನ್ನತಾಧಿಕಾರಯುಕ್ತ ಸಮಿತಿ (SBM) ಸಭೆಯಲ್ಲಿ ಅನುಮೋದಿಸಿ ಕೇಂದ್ರ ಮತ್ತು ರಾಜ್ಯ ಪಾಲಿನ ಒಟ್ಟು ಮೊತ್ತ ರೂ. 6.69 ಕೋಟಿಗಳನ್ನು ನಗರಸಭೆಗೆ ಬಿಡುಗಡೆ ಮಾಡಲಾಗಿರುತ್ತದೆ.
- ಅದರಂತೆ, ಕೋಲಾರ ನಗರಸಭೆಯು, ಘನತ್ಯಾಜ್ಯ ನಿರ್ವಹಣಾ ಘಟಕದಲ್ಲಿ ಅನುಮೋದಿತ DPR ನಂತೆ ಒಟ್ಟು ರೂ. 4.75 ಕೋಟಿಗಳ ಮೊತ್ತಕ್ಕೆ ಸಿವಿಲ್ ಕಾಮಗಾರಿಗಳ ಅನುಷ್ಠಾನ ಮತ್ತು ಯಂತ್ರೋಪಕರಣಗಳನ್ನು ಖರೀದಿ ಮಾಡಿ ಉಳಿಕೆಯಾದ ರೂ. 2.40 ಕೋಟಿಗಳ ಮೊತ್ತಕ್ಕೆ ಮರು ಕ್ರಿಯಾಯೋಜನೆಯನ್ನು ತಯಾರಿಸಿ ಜಿಲ್ಲಾಧಿಕಾರಿಗಳ ಹಂತದಲ್ಲಿ ಅನುಮೋದನೆ ಪಡೆಯಲಾಗಿರುತ್ತದೆ.

ಕ್ರಿಯಾಯೋಜನೆಯ ವಿವರಗಳು ಈ ಕೆಳಕಂಡಂತಿರುತ್ತದೆ.

| Sl. No. | Machinery/Equipment Details | Quantity (Nos.) | Estimated Amount in Rs. Lakh |
|---|---|---|---|
| 1 | Electrical Mini Tipper | 6 | 98.00 |
| 2 | Tractor Engine | 2 | 20.00 |
| 3 | Pushcarts | 15 | 5.50 |
| 4 | Wheel barrow | 12 | 3.0 |
| 5 | Front End Loader with Backhoe | 1 | 48.00 |
| 6 | Compactor | 1 | 51.00 |
| 7 | CC Cameras | 6 | 6.50 |
| 8 | Charging point for EV Vehicles | 2 | 8.00 |
| | Total | 45 | 240.00 |

- ಸದರಿ ಮೇಲ್ಕಂಡ ಕ್ರ.ಸಂ. (1) ರಿಂದ (7) ರವರೆಗೆ ಘಟಕಗಳನ್ನು, ನಿಯಮಾನುಸಾರ ದರಗಳ ಅನುಮೋದನೆ ಪಡೆದು ಅಂದಾಜುಪಟ್ಟಿ ತಯಾರಿಸಿ Government e-Marketplace (GeM) ಪೋರ್ಟಲ್ ಮೂಲಕ ಖರೀದಿಸಲಾಗಿದೆ.
- ಆದರೆ ಕ್ರ.ಸಂ. (8)ರ ಎಲೆಕ್ಟ್ರಿಕಲ್ ವೆಹಿಕಲ್ ಚಾರ್ಜಿಂಗ್ ಪಾಯಿಂಟ್ ಗೆ (Charging point for EV Vehicles) ಎಸ್.ಆರ್. ದರಗಳು ಲಭ್ಯವಿಲ್ಲದಿರುವುದರಿಂದ ಕೊಟೇಷನ್ ದರಗಳನ್ನು ಪಡೆದು ಸಕ್ಷಮ ಪ್ರಾಧಿಕಾರದಿಂದ ದರಗಳನ್ನು ಅನುಮೋದನೆ ಪಡೆದು ಅದರಂತೆ ಅಂದಾಜುಪಟ್ಟಿ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ಪಡೆದುಕೊಂಡು ಟೆಂಡರ್ ಕರೆಯಬೇಕಿರುತ್ತದೆ.
- ಆದರೆ, ಶ್ರೀ ಎನ್.ಆರ್. ದಿಲೀಪ್, ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ)ರವರು ನೇರವಾಗಿ ಪ್ಯಾಕೇಜ್‌ನಲ್ಲಿಯೇ ಇ.ವಿ. ಚಾರ್ಜಿಂಗ್ ಪಾಯಿಂಟ್ ನಮೂದಿಸಿ ಟೆಂಡರ್ ಕರೆದಿರುತ್ತಾರೆ ಎಂದು ದಿನಾಂಕ: 22-10-2024ರ ಪತ್ರದಲ್ಲಿ ವರದಿ ಮಾಡಿ ಜಿಲ್ಲಾಧಿಕಾರಿಗಳು, ಕೋಲಾರ ರವರು ವರದಿ ಮಾಡಿ ಕರ್ತವ್ಯ ಲೋಪವೆಸಗಿರುವ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಿಯಮಗಳು (ಸಿಸಿಎ) 1957ರ ನಿಯಮ 10(1)ರಡಿ ಸೇವೆಯಿಂದ ಅಮಾನತ್ತುಗೊಳಿಸಲು ಪೌರಾಡಳಿತ ನಿರ್ದೇಶನಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

- ಅದರಂತೆ, ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರು, ಸದರಿ ಶ್ರೀ ಎನ್.ಆರ್. ದಿಲೀಪ್, ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ) ನಗರಸಭೆ ಕೋಲಾರ ರವರು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದ ಹಿನ್ನಲೆಯಲ್ಲಿ ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ಸಿಸಿಎ) 1957ರ ನಿಯಮ 10(1)ರಡಿ ಸೇವೆಯಿಂದ ಅಮಾನತ್ತುಗೊಳಿಸಲು ಕೋರಿ, ಸರ್ಕಾರಕ್ಕೆ ದಿನಾಂಕ: 02.12.2024 ರಂದು ಪ್ರಸ್ತಾವನೆ ಸಲ್ಲಿಸಿದ ಮೇರೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 84 ಬಿಎಂಎಸ್ 2024 (ಇ), ದಿನಾಂಕ: 09-12-2024 ರಂತೆ ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರಿಸಿ, ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ.

**ಇಂದಿರಾ ಕ್ಯಾಂಟೀನ್:**

- ಪ್ರಸ್ತುತ ಕೋಲಾರ ನಗರಸಭೆಗೆ ಅಡುಗೆ ಕೋಣೆ ಸಹಿತ ಇಂದಿರಾ ಕ್ಯಾಂಟೀನ್ ಕಾರ್ಯನಿರ್ವಹಿಸುತ್ತಿದ್ದು ಸರ್ಕಾರದ ಆದೇಶ ಸಂಖ್ಯೆ: ನಅಇ 301 ಎಸ್ಎಫ್‌ಸಿ 2017 ದಿನಾಂಕ: 23-10-2017ರಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಪ್ರತಿ ಹೊತ್ತಿಗೆ ಪಟ್ಟಣ ಪಂಚಾಯಿತಿಗೆ 200 ಪ್ಲೇಟ್, ಪುರಸಭೆಗೆ 300 ಪ್ಲೇಟ್ ಮತ್ತು ನಗರಸಭೆಗೆ 500 ಪ್ಲೇಟ್‌ಗಳ ಆಹಾರ ಸರಬರಾಜು ಮಾಡಲು ಆದೇಶಿಸಲಾಗಿದೆ.

- ಅದರಂತೆ ಕೋಲಾರ ನಗರಸಭೆಗೆ ಪ್ರತಿ ಹೊತ್ತಿಗೆ 500 ಪ್ಲೇಟ್‌ಗಳಂತೆ 03 ಹೊತ್ತು ಆಹಾರ ಸರಬರಾಜು ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 ಮತ್ತು ನಿಯಮಗಳು, 2000 ಗಳನ್ವಯ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಕರೆದು REWARDS (Rural Environment and Water

Assets Reproductive Development Society) ಸಂಸ್ಥೆಯವರಿಗೆ ಕಾರ್ಯಾದೇಶವನ್ನು ನೀಡಲಾಗಿರುತ್ತದೆ.

- ಇಂದಿರಾ ಕ್ಯಾಂಟೀನ್‌ನಲ್ಲಿ ಬೆಳಗಿನ ಉಪಹಾರ, ಮದ್ಯಾಹ್ನದ ಊಟ ಮತ್ತು ರಾತ್ರಿ ಊಟವನ್ನು ಸಾರ್ವಜನಿಕರಿಗೆ ನೀಡಿರುವ ಬಗ್ಗೆ ನಿಗದಿತ ನಮೂನೆಗಳಾದ (6) ಮತ್ತು (7)ರಲ್ಲಿ ಆರೋಗ್ಯ ನಿರೀಕ್ಷಕರು / ಪರಿಸರ ಅಭಿಯಂತರರು ಮತ್ತು ಪೌರಾಯುಕ್ತರು ಪರಿಶೀಲಿಸಿ, ವಹಿಗಳನ್ನು (ಟೋಕನ್‌ಗಳು / ತೂಕ ಮಾಡಿರುವ ವಹಿ ಮತ್ತು ಸಿ.ಸಿ. ಕ್ಯಾಮೆರಾ ದೃಶ್ಯಾವಳಿಗಳು) ದೃಢೀಕರಿಸಿರುತ್ತಾರೆ. ಇವುಗಳ ಆಧಾರದ ಮೇಲೆ ಗುತ್ತಿಗೆದಾರರಿಗೆ ಬಿಲ್ ಮೊತ್ತವನ್ನು ಪಾವತಿಸಲಾಗಿರುತ್ತದೆ.

(ಕಡತ ಸಂಖ್ಯೆ: ನಅಇ 50 ಸಿಎಸ್‌ಎಸ್ 2025)

**(ರಹೀಂ ಖಾನ್)**
ಪೌರಾಡಳಿತ ಹಾಗೂ ಹಜ್ ಸಚಿವರು